2038(3187) ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಚಾದ್ರಿ ಪರ್ವತ ಶ್ರೇಣಿಯನ್ನು ಸಂರಕ್ಷಿತ ಅರಣ್ಯ ಪ್ರದೇಶವೆಂದು ಘೋಷಣೆ ಮಾಡಲಾಗಿದೆಯೇ;

ಆ) ಈ ಪರ್ವತ ಶ್ರೇಣಿಯಲ್ಲಿ ಗಣಿಗಾರಿಕೆ ನಡೆಸಬಾರದೆಂದು ನಿಯಮವಿದೆಯಲ್ಲವೇ;

ಇ) ಹಾಗಿದ್ದರೂ ಇಲ್ಲಿ ಅಕ್ರಮ ಗಣಿಗಾರಿಕೆ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಹೌದು. ಕೊಡಚಾದ್ರಿ ಪರ್ವತ ಶ್ರೇಣಿಯ 627 ಚದರ ಮೈಲಿ ಪ್ರದೇಶವನ್ನು ರಾಜ್ಯ ಅರಣ್ಯ (ಮನ್ನಾ ಜಂಗಲಿ) ವೆಂದು 1907 ರಲ್ಲಿ ಘೋಷಿಸಲಾಗಿದೆ.

ಆ) ಅರಣ್ಯ ಪ್ರದೇಶದಲ್ಲಿ ಗಣಿಗಾರಿಕೆ ಕೈಗೊಳ್ಳಲು ಕೇಂದ್ರ ಸರ್ಕಾರದ ಪೂರ್ವಾನುಮತಿಯನ್ನು 1980ರ ಅರಣ್ಯ (ಸಂರಕ್ಷಣಾ) ಕಾಯ್ದೆಯಡಿ ಪಡೆಯಬೇಕಾಗಿರುತ್ತದೆ.

ಇ) ಈ ಅಧಿಸೂಚಿತ ಅರಣ್ಯ ಪ್ರದೇಶದಲ್ಲಿ ಯಾವುದೇ ಅಕ್ರಮ ಗಣಿಗಾರಿಕೆಗಳು ನಡೆಯುತ್ತಿರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

2039 (1798) ಶ್ರೀ ಬಾದರ್ಲಿ ಹಂಪನಗೌಡ (ಸಿಂಧನೂರು): ಮಾನ್ಯ ಲೋಕೋಪಯೋಗಿ ಹಾಗೂ ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯ ಅಡಿಯಲ್ಲಿ ಮೊದಲನೇ ಹಂತದಲ್ಲಿ ಎಷ್ಟು ಕಿ.ಮೀ. ರಾಜ್ಯ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸಲು ತೆಗೆದುಕೊಳ್ಳಲಾಗಿದೆ;

ಆ) ಇಲ್ಲಿಯವರೆಗೂ ಎಷ್ಟು ಕಿ.ಮೀ. ರಾಜ್ಯ ಹೆದ್ದಾರಿಗಳು ಅಭಿವೃದ್ಧಿಪಡಿಸಲಾಗಿದೆ;

ಇ) 2ನೇ ಹಂತದ ಕಾಮಗಾರಿಗಳನ್ನು ತೆಗೆದುಕೊಳ್ಳಲು ಸರ್ಕಾರದ ಉದ್ದೇಶವಿದೆಯೇ;

ಈ) ರಾಜ್ಯ ಸರ್ಕಾರವು ರಾಜ್ಯದ ಹೆದ್ದಾರಿಗಳನ್ನು ಅಭಿವೃದ್ಧಿಪಡಿಸಲು ವಿಶ್ವ ಬ್ಯಾಂಕಿನಿಂದ ಪಡೆದಿರುವ ಸಾಲದ ಮೊತ್ತವೆಷ್ಟು;

ಉ) ಈ ಸಾಲದ ಹಣದಲ್ಲಿ ಎಷ್ಟು ಕಿ.ಮೀ. ರಾಜ್ಯ ಹೆದ್ದಾರಿಗಳನ್ನು ಅಭಿವೃದ್ಧಿ ಪಡಿಸಲು ಯೋಜನೆಗಳನ್ನು ಸರ್ಕಾರ ರೂಪಿಸಿದೆ;

ಊ) ಇಲ್ಲಿಯವರೆಗೂ ಎಷ್ಟು ಕಿ.ಮೀ. ರಾಜ್ಯ ಹೆದ್ದಾರಿಗಳನ್ನು ಪೂರ್ಣವಾಗಿ ಅಭಿವೃದ್ಧಿಪಡಿಸಲಾಗಿದೆ ಮತ್ತು ಪ್ರತಿ ಕಿ.ಮೀಟರಿಗೆ ತಗಲುವ ವೆಚ್ಚವೆಷ್ಟು;

ಖ) ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯಲ್ಲಿ ಯಾವ ತರಹದ ರಾಜ್ಯ ಹೆದ್ದಾರಿ ರಸ್ತೆಗಳನ್ನು ಅಭಿವೃದ್ಧಿಪಡಿಸಲು ಯೋಜನೆಗಳನ್ನು ರೂಪಿಸಲಾಗಿದೆ:

ಖಂ) ಲೋಕೋಪಯೋಗಿ ಇಲಾಖೆ ಮುಖಾಂತರ ರಾಜ್ಯ ಹೆದ್ದಾರಿಗಳನ್ನು ಮತ್ತು ಜಿಲ್ಲಾ ಪ್ರಮುಖ ರಸ್ತೆಗಳನ್ನು ಅಭಿವೃದ್ಧಿಪಡಿಸಲು ವಿವಿಧ ಹಣಕಾಸಿನ ಸಂಸ್ಥೆಯ ಮೂಲಕ ಪಡೆದಿರುವ ಸಾಲದ ಮೊತ್ತವೆಷ್ಟು:

ಎ) ಇಲ್ಲಿಯವರೆಗೂ ಕಟ್ಟಿರುವ ಬಡ್ಡಿಯ ಪ್ರಮಾಣವೆಷ್ಟು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಹಾಗೂ ಇಂಧನ ಸಚಿವರು):

ಅ) ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆಯಡಿಯಲ್ಲಿ ಒಟ್ಟು 2381 ಕಿ.ಮೀ. ರಸ್ತೆಯನ್ನು ಅಭಿವೃದ್ಧಿ ಪಡಿಸಲಾಗುತ್ತಿದೆ. ಇದರ ಪೈಕಿ 901 ಕಿ.ಮೀ. ರಸ್ತೆಯನ್ನು ಮೇಲ್ದರ್ಜೆಗೇರಿಸುವುದು ಮತ್ತು 1480 ಕಿ.ಮೀ. ರಸ್ತೆಯನ್ನು ಪುನಃಶ್ಚೇತನ ಗೊಳಿಸಲಾಗುತ್ತಿದೆ.

ಆ) ಈ ಯೋಜನೆಯಲ್ಲಿ ಇಲ್ಲಿಯವರೆಗೆ (28.02.2005 ಅಂತ್ಯದವರೆಗೆ) 1000 ಕಿ.ಮೀ. ರಸ್ತೆಯನ್ನು ಅಭಿವೃದ್ಧಿಪಡಿಸಲಾಗಿದೆ.

ಇ) 2ನೇ ಹಂತದಲ್ಲಿ (ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ–2 ಅಡಿಯಲ್ಲಿ) ರಸ್ತೆ ಕಾಮಗಾರಿಗಳನ್ನು ತೆಗೆದುಕೊಳ್ಳಲು ಸರ್ಕಾರ ಪಡಿಶೀಲಿಸುತ್ತಿದೆ.

ಈ) ರಾಜ್ಯ ಸರ್ಕಾರವು ರಾಜ್ಯದಲ್ಲಿಯ ಆಯ್ದ ಒಟ್ಟು 2381 ಕಿ.ಮೀ. ರಸ್ತೆಗಳನ್ನು ಅಭಿವೃದ್ಧಿಪಡಿಸಲು ವಿಶ್ವ ಬ್ಯಾಂಕ್‌ನಿಂದ 360 ಮಿಲಿಯನ್ ಡಾಲರ್ (1635 ಕೋಟಿ ರೂ.) ಗಳನ್ನು ಸಾಲದ ರೂಪದಲ್ಲಿ ಪಡೆದಿರುತ್ತದೆ.

ಉ) ಈ ಸಾಲದ ಹಣದಲ್ಲಿ 2381 ಕಿ.ಮೀ. ರಸ್ತೆಗಳನ್ನು ಅಭಿವೃದ್ಧಿಪಡಿಸಲು ಯೋಜಿಸಲಾಗಿದೆ.

ಊ) ಇಲ್ಲಿಯವರೆಗೆ ಒಟ್ಟು 1000 ಕಿ.ಮೀ. (400 ಕಿ.ಮೀ. ಮೇಲ್ದರ್ಜೆಗೇರಿಸಲಾಗಿದೆ ಹಾಗೂ 600 ಕಿ.ಮೀ. ಪುನಃಶ್ಚೇತನಗೊಳಿಸಲಾಗಿದೆ) ರಸ್ತೆಯನ್ನು ಅಭಿವೃದ್ಧಿಪಡಿಸಲಾಗಿದೆ. ಪ್ರತಿ ಕಿ.ಮೀ. ರಸ್ತೆಯನ್ನು ಮೇಲ್ದರ್ಜೆಗೇರಿಸಲು ರೂ.1.21 ಕೋಟಿಗಳು ಖರ್ಚಾಗುತ್ತದೆ ಹಾಗೂ ಪುನಃಶ್ಚೇತನಗೊಳಿಸಲು ಪ್ರತಿ ಕಿ.ಮೀ.ಗೆ 0.43 ಕೋಟಿ ರೂ.ಗಳು ಖರ್ಚಾಗುತ್ತದೆ.

ಋ) ಅಂತರಾಷ್ಟ್ರೀಯ ಮಟ್ಟದ ಸಲಹೆಗಾರರನ್ನು, ಅಭಿವೃದ್ಧಿ ಪಡಿಸಲಿರುವ ರಸ್ತೆಗಳನ್ನು ಗುರುತಿಸಲು ನಿಯೋಜಿಸಿ, ಅವರ ಅಧ್ಯಯನದ ಮೇಲೆ ರಸ್ತೆಗಳನ್ನು ಗುರುತಿಸಲಾಗಿದೆ. ಈ ರಸ್ತೆಗಳನ್ನು ಗುರುತಿಸಲು ಈ ಕೆಳಗಿನ ಅಧ್ಯಯನಗಳನ್ನು ಮಾಡಲಾಗುತ್ತದೆ.

i) ಪ್ರಸ್ತುತ ಜನವಾಹನ ಸಾಂದ್ರತೆ (ಟ್ರಾಫಿಕ್) ಹಾಗೂ ರಸ್ತೆಗಳ ವಿನ್ಯಾಸಿತ ಸಾಂದ್ರತೆ

ii) ಮಾರ್ಗ ಪ್ರಭಾವ ಕ್ಷೇತ್ರದಲ್ಲಿ ಆಗುವ ಅಭಿವೃದ್ಧಿ ಹಾಗೂ ಇದರಿಂದ ಹೆಚ್ಚಾಗುವ ಜನ ವಾಹನ ಸಾಂದ್ರತೆ

iii) ಪರಿಸರ ಪರಿಣಾಮ ಸಮೀಕ್ಷೆ

iv) ಸಾಮಾಜಿಕ ದಕ್ಕೆ ಸಮೀಕ್ಷೆ

v) ಯೋಜನೆಯಲ್ಲಿ ಅಭಿವೃದ್ಧಿಗೆ ಕೈಗೆತ್ತಿಕೊಳ್ಳುವ ರಸ್ತೆಗಳಿಂದ ಮುಂದೆ ದೊರೆಯಬಹುದಾದ ಆರ್ಥಿಕ ಲಾಭದ ಸಮೀಕ್ಷೆ, ಸರಕು ಸಾಗಾಣಿಕೆಯಲ್ಲಿ ಹಾಗೂ ರಸ್ತೆಯ ಫಲಾನುಭವಿಗಳಿಗೆ ಆಗುವ ಆರ್ಥಿಕ ಹಾಗೂ ಸಮಯದ ಉಳಿತಾಯದ ಸಮೀಕ್ಷೆ ಇತ್ಯಾದಿ

ಮೇಲಿನ ಎಲ್ಲಾ ಸಮೀಕ್ಷೆಗಳನ್ನು ಪರಿಗಣಿಸಿ ರಸ್ತೆಗಳ ಮೌಲ್ಯಮಾಪನ ಮಾಡಿದ ಆಧ್ಯತೆ ಮೇರೆಗೆ ರಸ್ತೆಗಳನ್ನು ಆರಿಸಲಾಗುವುದು.

ಈ) ಆಯ್ದ ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಪ್ರಮುಖ ರಸ್ತೆಗಳನ್ನು ಅಭಿವೃದ್ಧಿಪಡಿಸಲು ವಿಶ್ವ ಬ್ಯಾಂಕ್‌ನಿಂದ 360 ಮಿಲಿಯನ್ ಡಾಲರ್ (1635 ಕೋಟಿ ರೂ.) ಸಾಲವನ್ನು ಈ ಯೋಜನೆಯಡಿಯಲ್ಲಿ ಪಡೆಯಲಾಗಿದೆ.

2001–2004ರ ಅವಧಿಯಲ್ಲಿ ಆಯ್ದ ರಾಜ್ಯ ಹೆದ್ದಾರಿಗಳ ನಿರ್ವಹಣೆಯನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮವು ಹುಡ್ಕೊ ಸಂಸ್ಥೆಯಿಂದ ಒಟ್ಟು ರೂ.205 ಕೋಟಿಗಳನ್ನು ಸಾಲದ ನೆರವಿನಿಂದ ಕೈಗೊಂಡಿದೆ.

ಎ) ಪ್ರಸಕ್ತ ಸಾಲಿನ ಕೇಂದ್ರೀಯ ನೆರವಿನ ಆದೇಶದಂತೆ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಸಾಲದ ರೂಪದಲ್ಲಿ ಬಿಡುಗಡೆ ಆದ ಹಣದ ಮೇಲೆ ಮಾಹೆಯಾನ ಶೇಕಡ 9 ರಂತೆ ಬಡ್ಡಿ ಕಟ್ಟಬೇಕಾಗುತ್ತದೆ.

2040(2480) ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ): ಮಾನ್ಯ ಪ್ರವಾಸೋದ್ಯಮ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ದಕ್ಷಿಣ ತಾಲ್ಲೂಕು ತಾವರೆಕೆರೆ ಹೋಬಳಿಯ ದೊಡ್ಡಾ ಆಲದಮರ ಪ್ರಸಿದ್ಧ ಸ್ಥಳವಾಗಿದ್ದು ಇತ್ತೀಚೆಗೆ ನಶಿಸಿ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಬಂದಿದ್ದರೆ, ಸರ್ಕಾರದ ಕ್ರಮಗಳೇನು;

ಇ) ಮಾಗಡಿ ತಾಲ್ಲೂಕಿನ ಸಾವನದುರ್ಗ ಪ್ರವಾಸಿ ಕೇಂದ್ರವು ಆಕರ್ಷಣೀಯ ಸ್ಥಳವಾಗಿದ್ದು ಇದನ್ನು ಅಭಿವೃದ್ಧಿಪಡಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;

ಈ) ಇದ್ದಲ್ಲಿ, ಸರ್ಕಾರದ ಕ್ರಮವೇನು?

ಶ್ರೀ ಡಿ.ಟಿ. ಜಯಕುಮಾರ್ (ಪ್ರವಾಸೋದ್ಯಮ ಸಚಿವರು):

ಅ) ಬಂದಿದೆ.

ಆ) ತೋಟಗಾರಿಕೆ ಇಲಾಖೆಯಿಂದ ವರದಿಯಾದಂತೆ ದೊಡ್ಡ ಆಲದಮರವು ಸುಮಾರು ಎರಡು ಶತಮಾನದಷ್ಟು ಇತಿಹಾಸವುಳ್ಳದಾಗಿದ್ದು, ಈ ಆಲದ ಮರದ ಮುಖ್ಯ ತಾಯಿ ಮರದ ಬುಡವು ವಯಸ್ಸಿನಿಂದಾಗಿ ನಶಿಸುತ್ತಿದ್ದು, ಈ ಮರದ ನೂರಾರು ಬಿಳಲುಗಳು ಬೇರುಗಳಾಗಿ